# ಶ್ರೀಮತಿ. ಭಾಗ್ಯವತಿ ಅಮರೇಶ್

ನಿರ್ದೇಶಕರು, ಕೆ.ಎಫ್.ಡಿ.ಸಿ ಮತ್ತು ಬಿಜೆಪಿ ಉಪಾಧ್ಯಕ್ಷರು, ಬೆಂಗಳೂರು ದಕ್ಷಿಣ
(ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ)
ಮೊ:9880073623
#13, ಸದ್ಗುರು ಕೃಪಾ, 1ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-560027


---

Track on www.indiapost.gov.in>
<Dial 18002666868> <Wear Masks, Stay Safe>
भारतीय डाक
India Post
RL ADUGODI S.O <560030>
Counter No:3,09/11/2023,14:49
To:D K SHIVAKUMAR,BDA
PIN:560001, Bengaluru G.P.O.
From:S AMARESH,560027
Wt:20gms Ack Fee:3.00,REG=17.0
Amt:29.50(Cash)Tax:4.50
<Track on www.indiapost.gov.in>

ಗೆ,
ಶ್ರೀ. ಡಿ. ಕೆ. ಶಿವಕುಮಾರ್,
ಬೆಂಗಳೂರು ನಗರಾಭಿವೃದ್ಧಿ ಸಚಿವರು ಮತ್ತು
ಬೆಂಗಳೂರು ನಗರ ಉಸ್ತುವಾರಿ ಸಚಿವರು,
ವಿಧಾನ ಸೌಧ,
ಬೆಂಗಳೂರು 560001.

ಮಾನ್ಯರೆ,

**ವಿಷಯ: ವಿರಾಟ್ ಕೊಹ್ಲಿ ಮತ್ತು ಪುನಿತ್ ರಾಜ್‌ಕುಮಾರ್ ಅವರ ಹೆಸರನ್ನು ರಸ್ತೆಗಳಿಗೆ ಇಡಲು ಸಲ್ಲಿಸಿರುವ ಮನವಿಗೆ ನಿರಾಸಕ್ತಿ ತೋರುತ್ತಿರುವ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ದೂರು.**

O/C

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 27/10/2022 ರಂದು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ 145 ರ ವ್ಯಾಪ್ತಿಯಲ್ಲಿರುವ BTS ರಸ್ತೆ ಮತ್ತು 8ನೇ ಮುಖ್ಯರಸ್ತೆಗೆ ಕ್ರಮವಾಗಿ ಕರ್ನಾಟಕ ರತ್ನ ಪುನಿತ್ ರಾಜ್‌ಕುಮಾರ್ ಅವರ ಹೆಸರನ್ನು ಮತ್ತು 8ನೇ ಮುಖ್ಯರಸ್ತೆಗೆ, ವಿರಾಟ್ ಕೊಹ್ಲಿ ಅವರ ಹೆಸರನ್ನು ಇಡುವಂತೆ ಸಾರ್ವಜನಿಕರ ಅಭಿಪ್ರಾಯದೊಂದಿಗೆ ಬಿಬಿಎಂಪಿಯ ಆಡಳಿತಗಾರರಿಗೆ ಪತ್ರವನ್ನು ಬರೆಯಲಾಗಿತ್ತು. ಆದರೆ ಇಲ್ಲಿಯ ವರೆಗೂ ಅಂದರೆ 1 ವರ್ಷ ಕಳೆಯುತ್ತ ಬಂದರೂ, ಬಿಬಿಎಂಪಿ ಅಧಿಕಾರಿಗಳು ನಿರಾಸಕ್ತಿ ವಹಿಸಿದ್ದಾರೆ. ಇತ್ತಿಚಿಗೆ ಪುನಿತ್ ರಾಜ್‌ಕುಮಾರ್ ಅವರ 2ನೇ ಪುಣ್ಯಸ್ಮರಣೆ ದಿನವೂ ಮುಗಿತು. ವಿರಾಟ್ ಕೊಹ್ಲಿ ಅವರ ಜನ್ಮ ದಿನವೂ ಕೂಡ ಮುಗಿದಿದೆ. ಯಾವ ಕಾರಣಕ್ಕೆ ಬಿಬಿಎಂಪಿ ಅಧಿಕಾರಿಗಳು ನಿರಾಸಕ್ತಿ ತೋರುತ್ತಿದ್ದಾರೆ ಎಂದು ಸಾರ್ವಜನಿಕರು ತಮ್ಮ ಕೋಪವನ್ನು ವ್ಯಕ್ತಪಡಿಸುತ್ತಿದ್ದಾರೆ.

ಬಿಬಿಎಂಪಿರವರ ವಿಳಂಬತನವನ್ನು ನೋಡಿದರೆ ಇವರಿಗೆ ಹಣ ಬರುವ ಕೆಸಗಳಷ್ಟೇ ಮುಖ್ಯ ಎನಿಸುತ್ತಿದೆ. ಕೂಡಲೇ ತಾವು ಈ ಬಗ್ಗೆ ಗಮನ ಹರಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳು,

ಇಂತಿ ತಮ್ಮ ವಿಶ್ವಾಸಿ,
Bhagyavathi
ಭಾಗ್ಯವತಿ ಅಮರೇಶ್.

# ಶ್ರೀಮತಿ. ಭಾಗ್ಯವತಿ ಅಮರೇಶ್

ನಿರ್ದೇಶಕರು, ಕೆ.ಎಫ್.ಡಿ.ಸಿ ಮತ್ತು ಬಿಜೆಪಿ ಉಪಾಧ್ಯಕ್ಷರು, ಬೆಂಗಳೂರು ದಕ್ಷಿಣ
(ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ)
ಮೊ:9880073623
#13, ಸದ್ಗುರು ಕೃಪಾ, 11ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-560027


Ref. :

ಗೆ,  
ಮಾನ್ಯ ಆಡಳಿತಗಾರರು,  
ಬಿ.ಬಿ.ಎಂ.ಪಿ ಕೇಂದ್ರ ಕಛೇರಿ,  
ಎನ್ ಆರ್ ಸ್ಕ್ವೇರ್,  
ಬೆಂಗಳೂರು - 560002

ದಿನಾಂಕ: 27/10/2022

ಮಾನ್ಯರೇ,

ವಿಷಯ: ರಸ್ತೆಗೆ ವಿರಾಟ್ ಕೊಹ್ಲಿಯ ಹೆಸರು ನಾಮಕರಣ ಮಾಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ತಂಡದ ಮಾಜಿ ನಾಯಕ, ವಿಶ್ವ ಮಟ್ಟದ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಉತ್ತುಂಗದಲ್ಲಿರುವ, ಕಷ್ಟ ಕಾಲದಲ್ಲಿ ಭಾರತ ತಂಡವನ್ನು ರಕ್ಷಿಸುತ್ತಿರುವ, ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳ ಆರಾಧ್ಯ ದೈವ ಮತ್ತು ಭಾರತ ತಂಡದ ಆಪತ್ಬಾಂದವ ಶ್ರೀ ವಿರಾಟ್ ಕೊಹ್ಲಿರವರ ಹೆಸರನ್ನು ಬನ್ನೇರುಘಟ್ಟ ರಸ್ತೆಯಿಂದ ವಿಲ್ಸನ್ ಗಾರ್ಡನ್ ಸಂಪರ್ಕಿಸುವ, ಬಸ್‌ಗಳು ಸಂಚಾರ ಮಾಡುವ ಎಂಟನೇ ಮುಖ್ಯ ರಸ್ತೆಗೆ ನಾಮಕರಣ ಮಾಡಬೇಕೆಂದು ಕೋರುತ್ತೇನೆ.

ಈ ರಸ್ತೆಯು ಬನ್ನೇರುಘಟ್ಟ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ವಿಲ್ಸನ್ ಗಾರ್ಡನ್ ಸಿದ್ದಯ್ಯ ರಸ್ತೆಯನ್ನು ಸೇರುತ್ತದೆ.

ಈ ರಸ್ತೆಯನ್ನು ಆಡುಗೋಡಿ ಮಾರ್ಕೆಟ್ ಬಸ್ ರೂಟ್ ಎಂದು ಕೂಡ ಗುರುತಿಸಲ್ಪಡುತ್ತದೆ. ಈ ರಸ್ತೆಗೆ ವಿರಾಟ್ ಕೊಹ್ಲಿಯವರ ಹೆಸರನ್ನು ಇಡಬೇಕೆಂದು ಕ್ರಿಕೆಟ್ ಪ್ರೇಮಿಗಳ ಒತ್ತಾಸೆಯಾಗಿರುತ್ತದೆ ಮತ್ತು ನಾನು ಕೂಡ ವಿರಾಟ್ ಕೊಹ್ಲಿಯವರ ಅಭಿಮಾನಿಯಾಗಿರುತ್ತೇನೆ. ಆದ್ದರಿಂದ ತಮ್ಮಲ್ಲಿ ಮನವಿ ಮಾಡುಕೊಳ್ಳುವುದೇನೆಂದರೆ ಸಾರ್ವಜನಿಕರ ಅಭಿಪ್ರಾಯವನ್ನು ಪರಿಗಣಿಸಿ ಸದರಿ ರಸ್ತೆಗೆ ವಿರಾಟ್‌ಕೊಹ್ಲಿ ಅವರ ಹೆಸರನ್ನು ಇಡಲು ಅನುಮತಿ ನೀಡಬೇಕಾಗಿ ಕೋರುತ್ತೇನೆ.

ಇಂತಿ,

Bhagyavathi

ಭಾಗ್ಯವತಿ ಅಮರೇಶ್.

ಶ್ರೀಮತಿ. ಭಾಗ್ಯವತಿ ಅಮರೇಶ್
ನಿರ್ದೇಶಕರು, ಕೆ.ಎಫ್.ಡಿ.ಸಿ ಮತ್ತು ಬಿಜೆಪಿ ಉಪಾಧ್ಯಕ್ಷರು, ಬೆಂಗಳೂರು ದಕ್ಷಿಣ
(ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ)
ಮೊ:9880073623
#13, ಸದ್ಗುರು ಕೃಪಾ, 11ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-560027.

ಇವರಿಗೆ, ದಿನಾಂಕ : 24/10/2022

ಆಡಳಿತಗಾರರು,
ಬಿ.ಬಿ.ಎಂ.ಪಿ,
ಕೇಂದ್ರ ಕಛೇರಿ,
ಎನ್. ಆರ್ ವೃತ್ತ,
ಬೆಂಗಳೂರು - 560002.

ಮಾನ್ಯರೇ,

ವಿಷಯ: ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್‌ರವರ ಹೆಸರನ್ನು ರಸ್ತೆಗೆ ನಾಮಕರಣ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಹೊಂಬೇಗೌಡನಗರ ವಾರ್ಡ್ ನಂ 177(ಹಳೆಯ ವಾರ್ಡ್ ನಂ 145)ರ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಸ್ ರಸ್ತೆಗೆ ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್‌ರವರ ಹೆಸರನ್ನು ಇಡುವಂತೆ ಕೋರುತ್ತಿದ್ದೇನೆ.

ಸದರಿ ರಸ್ತೆಯು ಶಾಂತಿನಗರ ಬಸ್ ನಿಲ್ದಾಣದ ಮುಂಭಾಗ ಡಬಲ್ ರೋಡ್(ಕೆಂಗಲ್ ಹನುಮಂತಯ್ಯ ರಸ್ತೆ) ಪ್ರಾರಂಭವಾಗಿ ಬನ್ನೇರುಘಟ್ಟ ರಸ್ತೆ ತಲುಪುತ್ತದೆ, ಬನ್ನೇರುಘಟ್ಟ ರಸ್ತೆಯನ್ನು ತಲುಪುವ ಮುನ್ನ ಬಲಕ್ಕೆ ತಿರುಗಿ ಹೊಸೂರು ರಸ್ತೆಯನ್ನು ಕೂಡ ಮುಟ್ಟುತ್ತದೆ. ಈ ರಸ್ತೆಯನ್ನು *ಬಿ.ಟಿ.ಎಸ್ ರಸ್ತೆ* ಎಂದು ಮತ್ತು ಹೊಸೂರು ರಸ್ತೆಗೆ ಸೇರುವ ಬಲ ತಿರುವನ್ನು *12ನೇ ಕ್ರಾಸ್ ರಸ್ತೆ* ಎಂದು ಪರಿಚಿತವಾಗಿದೆ.

ಪುನೀತ್ ರಾಜ್‌ಕುಮಾರ್‌ರವರು ನಮ್ಮನ್ನು ಅಗಲಿ ಒಂದು ವರ್ಷ ಕಳೆಯುತ್ತಿರುವ ಈ ಸಂದರ್ಭದಲ್ಲಿ ಅವರ ಸ್ಮರಣಾರ್ಥವಾಗಿ, ಶಾಶ್ವತವಾಗಿ ಅವರ ಹೆಸರು ಇರಲಿ ಎಂದು ಈ ರಸ್ತೆಗಳಿಗೆ ಅವರ ಹೆಸರನ್ನು ನಾಮಕರಣ ಮಾಡಬೇಕೆಂದು ಸಾರ್ವಜನಿಕರ ಬೇಡಿಕೆಯಾಗಿದ್ದು ಅಭಿಮಾನಿಗಳ ಪರವಾಗಿ ಮತ್ತು ಅವರ ಅಭಿಮಾನಿಯಾಗಿ ನಾನು ರಸ್ತೆಗೆ ಅವರ ಹೆಸರನ್ನು ಇಡಲು ಕೋರುತ್ತಿದ್ದೇನೆ.

ಇಂತಿ

Bhagyavathi

ಭಾಗ್ಯವತಿ ಅಮರೇಶ್.